ಶ್ರೀ ಎಚ್. ಡಿ. ದೇವೇಗೌಡ. ಪ್ರಶ್ನೆ ಬಳಹ ಸ್ಪಷ್ಟವಾಗಿದೆ. ೧೯೮೫-೮೬ನೇ ಇಸವಿಯಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೈಗೊಂಡ ಹೊಸ ಕಾಮಗಾರಿಗಳು ಯಾವುವೂ ಇಲ್ಲ. ಹೋದ ವರ್ಷ ಯಾವ ಕೆಲಸವನ್ನು ತೆಗೆದುಕೊಂಡಿದ್ದೇವೆ ಎಂಬುದಕ್ಕೆ ಉತ್ತರ ತರಿಸಿ ಕೊಡುತ್ತೇನೆ. ಈ ವರ್ಷ ಹೊಸ ಕಾಮಗಾರಿಗಳನ್ನು ಸೇತು ಬಂಧನ ಯೋಜನೆಯಲ್ಲಿ ಕೆಲವು ತಾಲ್ಲೂಕನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಆಲೋಚನೆ ಮಾಡುತ್ತಿದೆ. ನಿಮ್ಮ ಎರಡನೆಯ ಪ್ರಶ್ನೆಯನ್ನು ತಾವೇ ಓದಿ. ನಾವು ಅದನ್ನು ವಿರೂಪಗೊಳಿಸಲಿಕ್ಕೆ ಹೋಗಿಲ್ಲ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಅರಂಬೋಡಿ ಗ್ರಾಮಕ್ಕೆ ಹೋಗಲು ನಿರ್ಮಿಸಲಿರುವ ಸೇತುವೆಗೆ ೨೧ ಲಕ್ಷಗಳನ್ನು ಮಂಜೂರು ಮಾಡಿದ್ದೇವೆ. ೭ ಲಕ್ಷ ರೂಪಾಯಿಗಳನ್ನು ಈ ವರ್ಷದಲ್ಲಿ ಖರ್ಚು ಮಾಡಿದ್ದೇವೆ. ೧೯೮೬ನೇ ಮೇ ತಿಂಗಳಲ್ಲಿ ಇದನ್ನು ಪೂರ್ಣಗೊಳಿಸಬೇಕೆಂದು ಸರ್ಕಾರದ ಆಸೆ ಇದೆ. ಹಣದ ಪರಿಸ್ಥಿತಿ ನೋಡಬೇಕಾಗಿದೆ. ಇನ್ನು ೧೪ ಲಕ್ಷವನ್ನು ಇದಕ್ಕೆ ಖರ್ಚು ಮಾಡಬೇಕಾಗಿದೆ. ಹಣದ ಆತಂಕ ಇಲ್ಲದೆ, ಹಣ ಸಿಕ್ಕಿದರೆ, ಜೋರಾಗಿ ಕೆಲಸ ಮಾಡುತ್ತೇವೆ. ಇಲ್ಲದಿದ್ದರೆ ಸ್ವಲ್ಪ ಹಿಂದು ಮುಂದು ಆಗುತ್ತದೆ.

ಶ್ರೀ ಕೆ. ವಸಂತ ಬಂಗೇರ.—ರಾಜ್ಯದಲ್ಲಿ ಅತಿ ದೊಡ್ಡ ಪ್ರದೇಶ. ಇದು ೮೧ ಗ್ರಾಮಗಳನ್ನು ಹೊಂದಿದೆ. ಅನೇಕ ಕುಗ್ರಾಮಗಳನ್ನು ಹೊಂದಿದೆ. ಅನೇಕ ಹಳ್ಳಿ ನಾಲೆ, ತೋಟ, ಗುಡ್ಡಗಾಡುಗಳಿಂದ ಕೂಡಿದ ಪ್ರದೇಶ, ಮಲೆನಾಡು ಪ್ರದೇಶ, ಈ ಬೆಳ್ತಂಗಡಿ ಕ್ಷೇತ್ರ ? ಈ ವರ್ಷ ಈ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಆದ್ದರಿಂದ ಇನ್ನೂ ಕೆಲವು ಕಾಮಗಾರಿಗಳನ್ನು ಕೊಡುತ್ತೀರಾ ಎಂದು ಕೇಳಿಕೊತ್ತೇನೆ. ಅರಂಬೋಡಿ ಸೇತುವೆಯನ್ನು ೧೯೮೬-೮೭ರಲ್ಲಿ ಪೂರ್ತಿ ಮಾಡುತ್ತೇವೆಂದು ಹೇಳಿದ್ದೀರಿ. ಸೇತುವೆ ಆದರೆ ಸಾಲದು. ಅಲ್ಲಿ ಅಪ್ರೋಚ್ ರೋಡ್ ಇಲ್ಲ. ಈ ವರ್ಷ ಅಪ್ರೋಚ್ ರೋಡನ್ನು ಮಾಡುತ್ತೀರಾ ? ಆರ್.ಎಲ್.ಇ.ಜಿ.ಪಿ ಸ್ಕೀಮಿನ ಪ್ರಕಾರ, ೧೨ ಕಾಮಗಾರಿಗಳನ್ನು ಸ್ಯಾಂಕ್ಷನ್ ಮಾಡಲು ಸರ್ಕಾರಕ್ಕೆ ಬರೆದುಕಳಿಸಿದ್ದಾರೆ. ಆ ಹತ್ತು ಕಾಮಗಾರಿಗಳನ್ನು ಕೊಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಹೆಚ್ ಡಿ. ದೇವೇಗೌಡ.—ಆರ್.ಎಲ್.ಇ.ಜಿ.ಪಿ. ಸ್ಕೀಮಿನ ಪ್ರಕಾರ ೧೦ ಕಾಮಗಾರಿಗಳನ್ನು ಸ್ಯಾಂಕ್ಷನ್ ಮಾಡಲು ಸರ್ಕಾರಕ್ಕೆ ಬಂದಿದೆಯೆಂದು ಹೇಳುತ್ತಿದ್ದಾರೆ. ದುಡ್ಡು ಇದ್ದರೆ, ಮಂಜೂರು ಮಾಡುತ್ತೇವೆ. ಇಲ್ಲದಿದ್ದರೆ ಇಲ್ಲ.

ಪ್ರಶ್ನೆ ೪೦೨ (೮೮೮)

ಶ್ರೀ ಆರ್. ನಾರಾಯಣಪ್ಪ

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಬೆಂಗಳೂರು ನಗರದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳ ಕುರಿತು

೧೦೨೮ ಶ್ರೀಮತಿ ಶಿವಕಾಂತಾ ಜೈರಾಜ್ ಚತುರೆ (ಶಾಸಕರು).—

ಅ) ಬೆಂಗಳೂರು ನಗರದಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬಂದು ವ್ಯಾಸಂಗ ಮಾಡುತ್ತಿರುವ ಹರಿಜನ ಗಿರಿಜನ ವಿದ್ಯಾರ್ಥಿಗಳಿಗಾಗಿ ಎಷ್ಟು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪನೆ ಮಾಡಲಾಗಿದೆ;

ಆ) ವಿದ್ಯಾರ್ಥಿ ನಿಲಯಗಳು ಇಲ್ಲದಿದ್ದಲ್ಲಿ, ಅವುಗಳನ್ನು ಪ್ರಸ್ತುತ ವರ್ಷದಿಂದ ಪ್ರಾರಂಭಿಸಲಾಗುವುದೇ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ೧೭ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು.
೩ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು
೧೨ ಖಾಸಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು

ಆ) ಉದ್ಭವಿಸುವುದಿಲ್ಲ